# ವಾಮಾಚಾರ

ವಿಜ್ಞಾನ ಮುಂದುವರಿದಿರುವ ಆಧುನಿಕ ಕಾಲದಲ್ಲೂ ಹಲವಾರು ರಾಜಕಾರಣಿಗಳು ಕುರ್ಚಿಗಂಟಿಕೊಳ್ಳಲು ಉಪಯೋಗಿಸುವ ಹಲವಾರು ಅನಾಚಾರಗಳಲ್ಲಿ ಇದೂ ಒಂದು ವಿಧವಾದ ಆಚಾರ.

ಇತ್ತೀಚೆಗೆ ಹಲವಾರು ದೃಶ್ಯಮಾಧ್ಯಮಗಳು ಇದನ್ನೇ ವೈಭವೀಕರಿಸಿ ಮುಗ್ಧರ ಮನದಲ್ಲಿ ಶಂಕೆ, ಭೀತಿಗಳನ್ನು ಮೂಡಿಸಿದವು. ವಾಮಾಚಾರದ ಮೂಲಕ ಏನನ್ನು ಬೇಕಾದರೂ ಸಾಧಿಸಬಹುದೆಂಬ ಅಭಿಪ್ರಾಯಗಳನ್ನು ಬಿಂಬಿಸಲು ವಾಮಾಚಾರಿಗಳೇ ಕಿರುತೆರೆಯಲ್ಲಿ ಶತಪ್ರಯತ್ನ ಮಾಡಿದರು.

ವಾಮಾಚಾರಕ್ಕೆ ಹಲವಾರು ಜನ ಬಲಿಯಾದರೆಂಬ ಪ್ರತೀತಿ ಇದೆ. ಆದರೆ ಇದು ಸಾಧ್ಯವೇ?

ಎಲ್ಲೋ ಕುಳಿತು, ಅವನ ಬೊಂಬೆ ಮಾಡಿ, ಕುಳಿತೆಡೆಯೇ ಆ ಬೊಂಬೆಗೆ ಸೂಜಿ ಚುಚ್ಚಿದರೆ ಇನ್ನೆಲ್ಲೋ ಇರುವ ವ್ಯಕ್ತಿ ವಿಲಿವಿಲಿ ಒದ್ದಾಡುವನು ಎಂಬ ವಿಚಿತ್ರವಾದ ನಂಬಿಕೆಯು ಮೂಢನಂಬಿಕೆಯ ಪರಮಾವಧಿಯೇ ಸೈ. ಹಾಗಿದ್ದಲ್ಲಿ ವೀರಪ್ಪನ್‌ನ ಬೊಂಬೆಯೊಂದನ್ನು ಮಾಡಿ, ನಕ್ಕೀರನ್ ಗೋಪಾಲನ್ ಕೈಲಿ ಅವನು ತುಳಿದ ಮಣ್ಣು, ಉಗುರು, ಕೂದಲು ತರಿಸಿ ಇಲ್ಲಿಂದಲೇ ಅವನನ್ನು ಇಲ್ಲವಾಗಿಸಬಹುದಿತ್ತಲ್ಲ!

ಆದರೆ... ಇಷ್ಟೊಂದು ಜನ ಆಚರಿಸುವಾಗ ಇದಕ್ಕೊಂದು ಹಿನ್ನೆಲೆ ಇರಬೇಕಲ್ಲವೇ?

ಇದೆ.

ವಾಮಾಚಾರಿಗಳು ಬಲಿಯಾಗುವವನು ತುಳಿದಾಡಿದ ಮಣ್ಣು, ಕೂದಲು, ಉಗುರುಗಳನ್ನು ತೆಗೆದುಕೊಳ್ಳುವುದು ಹಾಗೂ ಪೂಜೆ ಮಾಡುವುದು ಬರಿದೇ ಕಣ್ಣುಕಟ್ಟು. ನಂತರ ತಗೋ, ಇದನ್ನು ಹೇಗಾದರೂ ಅವನಿಗೆ ತಿನ್ನಿಸು ಎಂದೋ, ಇದನ್ನು ಅವನು ಕುಡಿಯುವ ಪಾನೀಯದಲ್ಲಿ ಬೆರೆಸು ಎಂದೋ ನೀಡುವ ಪ್ರಸಾದ ಕರುಳಿನ ಮೇಲೆ ಅಗಾಧ ಪ್ರಭಾವ ಬೀರಿ, ಬಲಿಯ ಹಸಿವು ಮುಚ್ಚುವಂತಾಗಿ, ದಿನವೂ ತಿನ್ನುವುದು ಕಡಿಮೆಯಾಗಿ, ತನ್ಮೂಲಕ ಸುಸ್ತಾಗಿ, ಮಂಕಾಗಿ, ವಾಂತಿ, ಬೇಧಿಗಳಿಂದ ನರಳಿ, ಕೊನೆಗೆ ಮರಣವನ್ನಪ್ಪುತ್ತಿದ್ದುದು ವಾಮಾಚಾರದ ಪ್ರಭಾವದಿಂದಲ್ಲ, ಕೊಟ್ಟ ಪ್ರಸಾದದಿಂದಾದ food poisoningನಿಂದ. ಆದರೆ ವಾಮಾಚಾರಿಗಳ ಠೀವಿ ಹೇಗಿರುತ್ತಿತ್ತೆಂದರೆ ಆ ಪ್ರಸಾದ ನಗಣ್ಯ, ಅವರ ಮಂತ್ರಗಳೇ ಗಣ್ಯ ಎನ್ನುವ ಮಟ್ಟಕ್ಕೆ ಜನರು ನಂಬುವಂತಾಗುತ್ತಿತ್ತು.

ವಾಮಾಚಾರದ ಇನ್ನೊಂದು ಮುಖ್ಯವಾದ ಅಂಶ ಸಂಮೋಹನವಿದ್ಯೆ ಅರ್ಥಾತ್ ಹಿಪ್ನಾಟಿಸಂ. ಹಿಪ್ನಾಟಿಸಂ ಮೂಲಕ ಮನುಷ್ಯನನ್ನು ಯಾವ ಸ್ಥಿತಿಗೆ ಬೇಕಾದರೂ ಕೊಂಡೊಯ್ಯಬಹುದು. ಆಹಾರ, ನೀರನ್ನು ನೋಡಿದಾಕ್ಷಣ ಓಡುವ ರೀತಿ, ತಿಂದದ್ದನ್ನೆಲ್ಲಾ ವಾಂತಿ ಮಾಡುವ ರೀತಿ ಹಿಪ್ನಾಟೈಸ್ ಮಾಡಬಹುದು. ಹಿಪ್ನಾಟಿಸಂನ ಟ್ರಾನ್ಸ್(ಸಂಮೋಹಿತ ಸ್ಥಿತಿ)ನಲ್ಲಿದ್ದಾಗ ಅವರ ಕೈಯಲ್ಲಿ ಕೊಲೆ ಮಾಡಿಸಿದರೂ ಅವರಿಗೆ ತಿಳಿಯುವುದಿಲ್ಲವೆಂಬುದು ವೈದ್ಯಶಾಸ್ತ್ರವೇ ಹೇಳುತ್ತದೆ. ಇಂತಹ ಸಂಮೋಹನವಿದ್ಯೆಯನ್ನು ವಾಮಾಚಾರಿಗಳು ಕರಗತ ಮಾಡಿಕೊಂಡಿರುತ್ತಾರೆ.

ವಾಮಾಚಾರ ನಡೆಯಲು ಪ್ರಮುಖವಾಗಿ ಬೇಕಾಗಿರುವುದು ಬಲಿಯಾಗುವವನ ಮಾನಸಿಕ ಸ್ಥಿತಿ. ಯಾವುದೇ ಖಾದ್ಯವನ್ನು ನೀಡದೆ ವ್ಯಕ್ತಿಯ ಆರೋಗ್ಯ ಹಾಳುಮಾಡಬೇಕಾದರೆ ಅವನ ಮನಸ್ಸನ್ನು ಹಿಡಿತದಲ್ಲಿ ಇಟ್ಟುಕೊಂಡರಾಯಿತು. ಬಲಿಯಾಗುವವನು ಮಾನಸಿಕವಾಗಿ ದುರ್ಬಲನೂ, ಕಂದಾಚಾರಗಳಲ್ಲಿ ನಂಬಿಕೆಯುಳ್ಳವನೂ ಆಗಿದ್ದರೆ, ಅವನ ಮನೆಯ ಮುಂದೆ ಕುಂಕುಮ ಹಚ್ಚಿರುವ ನಿಂಬೆಹಣ್ಣು ಹಾಗೂ ಇತರ ಪೊಟ್ಟಣಗಳನ್ನು



ಜೋಡಿಸಿಟ್ಟಿರುವ ಮಣ್ಣಿನ ತಟ್ಟೆಯನ್ನು ನೋಡಿದ ತಕ್ಷಣ ಅಧೀರನಾಗುತ್ತಾನೆ. ಇನ್ನು ಅವನ ಹಿತಶತ್ರುಗಳಲ್ಲೊಬ್ಬರು ನಿನಗೆ ಮಾಟ ಮಾಡಿಸಿದ್ದಾರೆ ಎಂದುಬಿಟ್ಟರಾಯ್ತು, ಅವನು auto suggestions ಮೂಲಕ ಖಿನ್ನನಾಗುತ್ತಾ ಸಾಗಿ, ರೋಗಗ್ರಸ್ತನಾಗಿ ಹಾಸಿಗೆ ಹಿಡಿಯುತ್ತಾನೆ.

ವಾಮಾಚಾರಕ್ಕೆ ಅಥರ್ವಣ ವೇದವು ಪುಷ್ಟಿ ನೀಡುತ್ತದೆ ಎನ್ನುವುದು ಅದನ್ನು ಅಪಭ್ರಂಶಗೊಳಿಸುವವರು ಮಾತ್ರ. ಸಂಸ್ಕೃತ ಭಾಷೆಯೇ ಹಾಗೆ. ಗೋ ಎಂಬ ಅಕ್ಷರಕ್ಕೇ 32 ಅರ್ಥಗಳಿರುವಾಗ ವೇದವನ್ನು ಬೇಕಾದಂತೆ ಅರ್ಥೈಸುವುದು ಅಸಾಧ್ಯವೇನಲ್ಲ. ಜನತೆಯನ್ನು ಮರುಳುಮಾಡಿ, ಅವರ ಮೇಲೆ ಹಿಡಿತ ಸಾಧಿಸಲು ಹಿಂದಿನ ಕಾಲದಲ್ಲಿ ಇದ್ದದ್ದು ಎರಡೇ ವಿಧಗಳು ಸದಾಚಾರ ಮತ್ತು ವಾಮಾಚಾರ. ಸದಾಚಾರವು ದೇವಸ್ಥಾನ, ಅರ್ಚಕವರ್ಗಕ್ಕೆ ಸೀಮಿತವಾಗಿರುತ್ತಿತ್ತು. ದೇವರಿಗೆ ಕಾಣಿಕೆ ನೀಡದಿದ್ದರೆ ದೇವನು ಮುನಿಸಿಕೊಳ್ಳುವನು ಎಂದು ಅವರೂ ಒಂದು ವಿಧವಾದ ಶೋಷಣೆ ಮಾಡುತ್ತಿದ್ದರೂ ಅದು ಸದಾಚಾರದ ಮುಸುಕಿನ ಭಯೋತ್ಪಾದನೆಯಾಗಿತ್ತು.

ವಾಮಾಚಾರವು ಕೆಲವು ಸಮಯಸಾಧಕರಿಗೆ ಭಯದ ಮೂಲಕ ಜನತೆಯ ಮೇಲೆ ಹಿಡಿತ ಸಾಧಿಸುವ ಮಾರ್ಗವಾಯಿತು. ಒಂದಿಷ್ಟು ರಸಾಯನಶಾಸ್ತ್ರ, ಕೊಂಚ ಧ್ವನಿಮಾಯೆ, ಸಂಮೋಹನವಿದ್ಯೆ, ಜಾದೂಗಾರಿಕೆ, ವಾಗ್ಮಿತೆ ಮತ್ತು ಮೋಹಕವಾದ (ಅಥವಾ ಕರಾಳವಾದ) ಅಂಗಸೌಷ್ಠವವಿದ್ದವರು ಮಂತ್ರವಾದಿಗಳೂ, ವಾಮಾಚಾರಿಗಳೂ ಆಗಿಬಿಡುತ್ತಿದ್ದರು. ದೇವಸ್ಥಾನಕ್ಕೆ ಹೋಗಿ, ದೇವರಲ್ಲಿ ಮೊರೆಯಿಟ್ಟರೂ ಯಶ, ನೆಮ್ಮದಿ ಕಾಣದ ಕೆಲವರಲ್ಲಿ ಇಂತಹ ವ್ಯಕ್ತಿಗಳು ದೆವ್ವ, ಪಿಶಾಚಿ, ಮಾಟ, ಮಂತ್ರಗಳ ಬಗ್ಗೆ ಹೇಳಿ, ಅವರ ಮನಸ್ಸನ್ನು ಕೆಡಿಸಿ, ತಮ್ಮಲ್ಲಿ ಬಂದರೆ ಅದಕ್ಕೆ ಪರಿಹಾರ ನೀಡುವುದಾಗಿ ನಂಬಿಸುತ್ತಿದ್ದರು. ವಾಮಾಚಾರ ಕೆಲವು ಜನರನ್ನು ಉಪಾಯವಾಗಿ ಕೊಲ್ಲಲು ಸಹ ಬಳಸುವ ತಂತ್ರವಾಗಿತ್ತು. ಒಟ್ಟಿನಲ್ಲಿ ವಾಮಾಚಾರ ಅಜ್ಞಾನಿಗಳು, ಮುಗ್ಧರು ಮತ್ತು ಸುಲಭವಾಗಿ ಸಂಮೋಹನಕ್ಕೆ ಒಳಗಾಗುವವರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಸ್ವಾರ್ಥಪರ ಬುದ್ಧಿವಂತರು ಆಡುತ್ತಿದ್ದ ನಾಟಕವಷ್ಟೆ.

■ ವೈ-ಚಾರಿ